# ಮಾವೋವಾದಿಗಳ ನಿಗ್ರಹವೋ ಇಲ್ಲಾ ಜನರ ಮೇಲಿನ  ಯುದ್ಧವೋ.?!

ಇತ್ತೀಚೆಗೆ ಭಾರತ ಸರ್ಕಾರದ ಗೃಹಮಂತ್ರಿ ಪಿ.ಚಿದಂಬರಂ ಮಾವೋವಾದಿ ಕ್ರಾಂತಿಕಾರಿಗಳ ವಿರುದ್ಧ ಭಾರಿ  ಮಟ್ಟದಲ್ಲಿ ಯುದ್ಧ ಸಾರಿದ್ದಾರೆ. ಇದು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಮತ್ತು ಪ್ರಧಾನಿ ಮನಮೋಹನ ಸಿಂಗ್ ಸೂಚನೆಯಂತೆ ನಡೆಯುತ್ತಿದೆ. ಈ ಯುದ್ಧ ಅಮೇರಿಕ ಹಾಗೂ ಯೂರೋಪಿನ ಸಾಮ್ರಾಜ್ಯಶಾಹಿ ಹಿತಾಸಕ್ತಿಗಳಿಗೆ, ಇಲ್ಲಿನ ಅವರ ಬಂಟರಿಗೆ ಅಗತ್ಯವಾಗಿದೆ. ಇಂದು ಸರ್ಕಾರ ಮಾವೋವಾದಿಗಳು ದೇಶದ ಅಂತರಿಕ ಭದ್ರತೆಗೆ ಪ್ರಧಾನ ಅಪಾಯ, ಅದು ಭಯೋತ್ಪಾದಕ ಚಟುವಟಿಕೆ ಎಂದು ಹೇಳುತ್ತಾ ಕ್ರಾಂತಿಕಾರಿ ಹೋರಾಟವನ್ನು ಬಗ್ಗು ಬಡಿಯಲು ಹೊರಟಿದೆ. ಇದನ್ನು ಕಳೆದ 42 ವರ್ಷಗಳಿಂದಲೂ ನಡೆಸುತ್ತಿದ್ದರೂ ಬಗ್ಗು ಬಡಿಯಲಾಗಿಲ್ಲ ಎಂಬುದು ವಾಸ್ತವ. ಬದಲಾಗಿ ಈ ಕ್ರಾಂತಿಕಾರಿ ಚಳುವಳಿ ದೇಶಾದ್ಯಂತ ಹರಡುತ್ತಿರುವುದನ್ನು ಕಾಣುತ್ತಿದ್ದೇವೆ. ಸೆಲ್ವ ಜುಡುಂ ನಂತಹ ದುಡಿಯುವ ಜನರನ್ನೇ ದುಡಿಯುವ ಜನರ ಮೇಲೆ ಎತ್ತಿಕಟ್ಟಿ ಪ್ರತಿಕ್ರಾಂತಿಕಾರಿ ಗುಂಪುಗಳನ್ನು ರಚಿಸಿ ಕಗ್ಗೊಲೆಗೈಯುವ ಹೊಸರೀತಿಯ ಫ್ಯಾಸಿಸ್ಟ್ ಪ್ರಯೋಗ ಕೂಡ ವಿಫಲವಾಗಿರುವುದು ಸರ್ಕಾರಗಳಿಗೆ ನುಂಗಲಾರದಂತಾಗಿದೆ.

ಅದಕ್ಕೆ ಈಗ ನಡೆಸಲು ಹೊರಟಿರುವ ದಮನಕಾಂಡ ಹಿಂದೆಂದಿಗಿಂತಲೂ ತೀವ್ರ ಸ್ವರೂಪದ್ದಾಗಿರುತ್ತದೆ. ಅದರ ಸೂಚನೆಗಳು ಈಗಲೇ ಕಾಣತೊಡಗಿವೆ. ಅಂತರಿಕ ಭದ್ರತೆಗೆ ಸೇನೆ ಬಳಸುವಂತಿಲ್ಲ ಎಂದು ಹೇಳುತ್ತಾ ಬಂದಿದ್ದರೂ ಕಾಶ್ಮೀರ ಹಾಗೂ ಈಶಾನ್ಯ ಭಾರತ ಪ್ರದೇಶಗಳಂತೆ ಮಾವೋವಾದಿ ಹೋರಾಟದ ಮೇಲೂ  ಸೇನೆಯನ್ನು ಪೂರ್ಣಪ್ರಮಾಣದಲ್ಲಿ ಬಳಸುವ ತಯಾರಿ ನಡೆಯುತ್ತಿದೆ. ಮಾವೋವಾದಿಗಳು ಕಂಡಲ್ಲಿ ಗುಂಡಿಕ್ಕುವ ಆದೇಶವನ್ನು ಸೇನೆಗೆ ಹಾಗು ವಾಯುಪಡೆಗೆ ನೀಡಬೇಕೆಂಬುದು ಚಿದಂಬರಂ ತರಹದವರ ಅಭಿಲಾಷೆಯಾಗಿದೆ. ಮಾವೋವಾದಿಗಳನ್ನು ಕ್ರೂರ ಭಯೋತ್ಪಾದಕರು ಎಂಬಂತೆ ಚಿತ್ರಿಸಿ ಕೇಂದ್ರ ಸರ್ಕಾರ ಹಾಗೂ ರಾಜ್ಯಸರ್ಕಾರಗಳು ನಿಷೇಧ ಹೇರಿವೆ. ಇದೇ ನವಂಬರಿನಿಂದ ಪೂರ್ಣ ಪ್ರಮಾಣದಲ್ಲಿ ಆರಂಭ ಮಾಡಬೇಕೆನ್ನುವ ಈ ಯುದ್ಧಕ್ಕೆ ಈಗಾಗಲೇ ಭಾರಿ ತಯಾರಿ ನಡೆಸಲಾಗುತ್ತಿದೆ. ಈಗಾಗಲೇ ಎರಡು ಲಕ್ಷದಷ್ಟು ಪೋಲೀಸ್ ಹಾಗೂ ಅರೆಸೈನಿಕ ಪಡೆಗಳನ್ನು ಚತ್ತೀಸ್‌ಗಡ ಪ್ರದೇಶವೊಂದಕ್ಕೇ ಕಳುಹಿಸಿ 'ಆಪರೇಷನ್ ಗ್ರೀನ್ ಹಂಟ್'  ಎಂಬ ಕಾರ್ಯಾಚರಣೆ ಭಾರಿ ಪ್ರಚಾರದೊಂದಿಗೆ ಆರಂಭಿಸಿದೆ. ಆದರೆ ಅದರಲ್ಲಿ ಯಶ ಸಿಕ್ಕಿಲ್ಲ. ಬದಲಿಗೆ ಈ ಹೆಸರಿನಲ್ಲಿ ಅಮಾಯಕ ಆದಿವಾಸಿಗಳನ್ನು ಹಿಡಿದು ಮಾವೋವಾದಿಗಳೆಂದು ಬಿಂಬಿಸಿ ಕೊಲ್ಲಲಾಗಿದೆ ಎಂಬ ವರದಿಗಳಿವೆ. ಅದೇ ರೀತಿಯಲ್ಲಿ ದೇಶಾದ್ಯಂತ ಸಂಚಲನೆ ಮೂಡಿಸಿರುವ ಲಾಲ್‌ಗಡ  ಅಥವಾ ಜಂಗಲ್ ಮಹಲ್ ಜನರ ಹೋರಾಟವನ್ನು ದಮನಿಸಿ ಹೊಸಕಿ ಹಾಕಲು 'ಆಪರೇಷನ್ ಲಾಲ್‌ಗಡ್' ಎಂಬ ಕಾರ್ಯಾಚರಣೆ ನಡೆಸಿ ಪಶ್ಚಿಮ ಬಂಗಾಲದ ಈ ಪ್ರದೇಶದಿಂದ ಮಾವೋವಾದಿಗಳ ಮೂಲೋತ್ಪಾಟನೆ ಮಾಡಲಾಗುತ್ತದೆ ಎಂದು ಹೇಳಿದ್ದರೂ ಅದು ಸಾಧ್ಯವಾಗಿಲ್ಲ ಬದಲಿಗೆ ಕಾರ್ಯಾಚರಣೆಯೇ ವಿಫಲವಾಗಿದೆ ಎಂಬುದನ್ನು ಸರ್ಕಾರಗಳೇ ಒಪ್ಪಿಕೊಂಡಿವೆ. ಮಾವೋವಾದಿ ಕ್ರಾಂತಿಕಾರಿಗಳನ್ನು ಕ್ರೂರ ಭಯೋತ್ಪಾದಕರು ಎನ್ನುವಂತೆ ಚಿತ್ರಿಸಲು ಮುಖ್ಯವಾಹಿನಿಗೆ ಸೇರಿದವುಗಳು ಎಂದು ಹೇಳಿಕೊಳ್ಳುವ ಕೆಲವು ಪತ್ರಿಕಾ ಹಾಗೂ ವಿದ್ಯುನ್ಮಾನ (ಎಲೆಕ್ಟ್ರಾನಿಕ್) ಮಾಧ್ಯಮಗಳು ಪೈಪೋಟಿ ನಡೆಸಲಾರಂಭಿಸಿವೆ. ಇದರಲ್ಲಿ ಟೈಮ್ಸ್ ಸಮೂಹ ಮುಂಚೂಣಿಯಲ್ಲಿದೆ. ಆಳುವ ಜನಗಳ ಪರವಾಗಿ ನಿಂತು ದುಡಿಯುವ ಜನರ ಹೋರಾಟವನ್ನು ಕಿಡಿಗೇಡೀಕರಣಗೊಳಿಸಲು ಯತ್ನಿಸುತ್ತಿವೆ. ತಾಲಿಬಾನ್ ರೀತಿಯೇ ಮಾವೋವಾದಿಗಳದು ಎಂಬಂತೆ ಬಿಂಬಿಸಲು ಹೆಣಗುತ್ತಿವೆ. ಅದೇ ವೇಳೆಯಲ್ಲಿ ಸರ್ಕಾರ ಮತ್ತವುಗಳ ಪಡೆಗಳು, ಅಧಿಕಾರಶಾಹಿಗಳು ನಡೆಸುವ ಬಹುಸಂಖ್ಯಾತ ಜನರ ಮೇಲಿನ ಭಯೋತ್ಪಾದನೆ, ಕೌರ್ಯ,

ಶೋಷಣೆ, ಅನ್ಯಾಯಗಳನ್ನು ಜಾಣ ರೀತಿಯಲ್ಲಿ ಮರೆಮಾಚಲು ಕೆಲಸ ಮಾಡುತ್ತಿವೆ. ಈ ಕೆಲಸಗಳೇ ಇವರುಗಳು ಬಿಂಬಿಸಿಕೊಂಡಿರುವ ಪ್ರಧಾನ ಧಾರೆಯದು ಎಂಬುದನ್ನು ಚೆನ್ನಾಗೇ ತೋರಿಸಿಕೊಡುತ್ತಿದ್ದಾರೆ. ಇವುಗಳು ಸರ್ಕಾರಿ ಭಯೋತ್ಪಾದನೆಯನ್ನು ಸಮರ್ಥಿಸುತ್ತಾ ಜನರ ಸ್ವಯಂರಕ್ಷಣಾತ್ಮಕ ಹೋರಾಟಗಳನ್ನು ರಕ್ತದಲ್ಲಿ ಮುಳುಗಿಸಲು ಸಾರ್ವಜನಿಕ ವಾತಾವರಣ ನಿರ್ಮಾಣ ಮಾಡಲು ಪ್ರಯತ್ನಿಸುತ್ತಿವೆ. ಟಾಟಾ, ಜಿಂದಾಲ್, ಮಿತ್ತಲ್‌ನಂತಹ ಭಾರಿ ಬಂಡವಾಳಶಾಹಿಗಳು ಹಾಗೂ ರಾಷ್ಟ್ರೀಯ ಅಂತರಾಷ್ಟ್ರೀಯ ಗಣಿದೊರೆಗಳ ಬೆಂಬಲಕ್ಕೆ ನಿಂತಿರುವ ಈ ಮಾಧ್ಯಮಗಳು ಜನಸಾಮಾನ್ಯರಿಗೆ ಜನವಿರೋಧಿ ಮತ್ತು ದೇಶವಿರೋದಿಯಾಗಿ ಕಾಣತೊಡಗಿವೆ.

ಸರ್ಕಾರಗಳು ಪ್ರಜಾಪ್ರಭುತ್ವವಾದಿಗಳಿಗೆ ಕರಾಳ ಕಾಯಿದೆ ಮೂಲಕ ಬೆದರಿಕೆ ಹಾಕಿರುವುದಲ್ಲದೆ ಬಿನಾಯಕಸೇನ್‌ರಂತಹ ಮಾನವಹಕ್ಕು ಕಾರ್ಯಕರ್ತರನ್ನು, ಸಾಕ್ಷಚಿತ್ರ ನಿರ್ದೇಶಕರನ್ನು ಸುಳ್ಳು ಕೇಸುಗಳಡಿ ಬಂಧಿಸುತ್ತಿದೆ. ಪೋಲೀಸ್ ದೌರ್ಜನ್ಯ ವಿರೋದಿ ಜನ ಸಮಿತಿಯ(ಪಿ.ಎಸ್.ಬಿ.ಜೆ.ಸಿ) ಛತ್ರಧರ್ ಮಹತೋರನ್ನು ಮಾವೋವಾದಿಗಳೊಂದಿಗೆ ಸಂಬಂಧ ಕಲ್ಪಿಸಿ ಬಂಧಿಸಿಡಲಾಗಿದೆ. ಮೊನ್ನೆ 5-10-09ರಂದು ಪಶ್ಚಿಮ ಬಂಗಾಲದ ಪ್ರಸೂನ್ ಚಟ್ಟೋಪಾಧ್ಯಾಯ ಹಾಗೂ ರಾಜಾಸರ್ಕೆಲ್ ಎಂಬ ಮಾನವ ಹಕ್ಕು ಹೋರಾಟಗಾರರು ಹಾಗು ಪ್ರಜಾಪ್ರಭುತ್ವವಾದಿ ಹೋರಾಟಗಾರರನ್ನು ಲಾಲ್‌ಗಡ ಜನರ ಹೋರಾಟವನ್ನು ಬೆಂಬಲಿಸಿದ್ದಕ್ಕೆ ಮಾವೊವಾದಿಗಳೊಂದಿಗೆ ಸಂಬಂಧ ಇದೆ ಎಂಬ ನೆಪ ಒಡ್ಡಿ ಕಾನೂನು ವಿರೋಧಿ ಚಟುವಟಿಕೆಗಳ ಪ್ರತಿಬಂಧಕ ಕಾಯ್ದೆ (ಪಿ.ಸಿ.ಪಿ.ಎ)ಯಡಿ ಬಂಧಿಸಲಾಗಿದೆ. ಲಾಲ್ ಗಡ ಜನರ ಹೋರಾಟವನ್ನು ಬೆಂಬಲಿಸುವವರೆಲ್ಲರೂ ಕಾನೂನು ವಿರೋದಿಗಳು ಎಂದು ಪರಿಗಣಿಸಿ ತೀವ್ರ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಅಲ್ಲಿನ ಸಿ.ಪಿ.ಎಂ ನೇತೃತ್ವದ ಎಡರಂಗ ಸರ್ಕಾರ ಬೆದರಿಕೆ ಹಾಕಿದೆ.

ಇತ್ತೀಚೆಗೆ ಜಗತ್ತಿನ ಉಕ್ಕು ದೊರೆ ಲಕ್ಷ್ಮಿ ಮಿತ್ತಲ್ ಸರ್ಕಾರಗಳು ಭೂಮಿಯನ್ನು ರೈತರಿಂದ ಬಿಡಿಸಿ ಕೊಡುವುದು ಸೇರಿದಂತೆ ಎಲ್ಲಾ ರೀತಿಯ ಸಹಕಾರ ನೀಡದಿದ್ದಲ್ಲಿ ತನ್ನ ಗಣಿಯೋಜನೆಗಳನ್ನು ಬಾರತದ ಆ ಪ್ರದೇಶಗಳಿಂದ ಹಿಂತೆಗೆದು ಕೊಳ್ಳುವುದಾಗಿ ಬಹಿರಂಗವಾಗಿ ಬೆದರಿಕೆ ಹಾಕಿದ್ದರು. ಕೂಡಲೇ ಸರ್ಕಾರಗಳು ದುಂಬಾಲು ಬಿದ್ದು ಹಾಗೆ ಮಾಡಬಾರದೆಂದೂ ಎಲ್ಲಾ ಸಹಕಾರ ನೀಡುವುದಾಗಿಯೂ ಭರವಸೆ ನೀಡಿದ್ದವು. ಮಿತ್ತಲ್ ಹಾಗೆ ಬಹಿರಂಗ ಬೆದರಿಕೆ ಹಾಕಲು ಕಾರಣಗಳು ಬಲವಾಗೇ ಇದೆ. ಅವೆಂದರೆ ನಂದಿಗ್ರಾಮ, ಸಿಂಗೂರು, ಲಾಲ್‌ಗಡಗಳಲ್ಲಿ ಜನರು ನಡೆಸುತ್ತಿರುವ ಸಮರಶೀಲ ಹೋರಾಟಗಳಿಂದಾಗಿ ಇಂತಹ ಯೋಜನೆಗಳನ್ನು ಜಾರಿ ಮಾಡಲು ಸಾದ್ಯ ಆಗದೇ ಹೋಗಿರುವುದು. ಅಲ್ಲದೆ ತಾನು ಆರಂಬಿಸಲು ಹೊರಟಿದ್ದ ಗಣಿಗಾರಿಕಾ ಯೋಜನೆಗಳಿಗೆ ಜಾರ್ಖಂಡ್, ಒರಿಸ್ಸ ಜನರಿಂದ ತೀವ್ರ ವಿರೋಧ ಅಡ್ಡಿಯಾಗಿ ಬಂದಿರುವುದು. ಎಲ್ಲಕ್ಕಿಂತಲೂ ಮುಖ್ಯವಾಗಿ ಮಾವೋವಾದಿ ಸಶಸ್ತ್ರದಳಗಳು ಈ ಪ್ರದೇಶಗಳಲ್ಲಿ ಜನರೊಂದಿಗೆ ನಿಂತಿರುವುದು. ತಾನು ನೂರಾರು ಕೋಟಿ ರೂಪಾಯಿ ಖರ್ಚು ಮಾಡಿದರೂ ಸೆಲ್ವಜುಡುಂನಿಂದಲೂ ತನ್ನ ಕಾರ್ಯ ಸಾದ್ಯವಾಗದೇ ಹೋಗಿರುವುದು.

ಕೇಂದ್ರ ಹಾಗು ರಾಜ್ಯ ಸರ್ಕಾರಗಳ ಈ ಯುದ್ಧ ತಯಾರಿಯನ್ನು ಮಾವೋವಾದಿಗಳು ಮೊದಲೇ ನಿರೀಕ್ಷಿಸಿದ್ದರು. ಈ ನಿಟ್ಟಿನಲ್ಲಿ ಸಿ.ಪಿ.ಐ.(ಮಾವೋವಾದಿ)ಯ ರಾಜಕೀಯ ಮಂಡಳಿಯು ತನ್ನ ಕಾರ್ಯಕರ್ತರಿಗೆ ಕಳುಹಿಸಿದ ಸುತ್ತೋಲೆಯ ಕೆಲವು ಮಾಹಿತಿಗಳು ಆಂಗ್ಲ ಪತ್ರಿಕೆ 'ದಿ ಹಿಂದು' ನಲ್ಲಿ ಪ್ರಕಟವಾಗಿತ್ತು. ಅದರಲ್ಲಿ ಸರ್ಕಾರಗಳು ಸಾರಿರುವ ಯದ್ಧವನ್ನು ಸೋಲಿಸಲು ತನ್ನ ಕಾರ್ಯಕರ್ತರಿಗೆ ಕರೆ ನೀಡಿದೆ. ಹೆಚ್ಚಿನ ತ್ಯಾಗ ಬಲಿದಾನಗಳಿಗೂ ತಯಾರಾಗಬೇಕೆಂದು ಅದು ಹೇಳಿದೆ. ಸರ್ಕಾರಗಳು ಸಾರಿರುವ ಈ ದೇಶದ ದುಡಿಯುವ ಜನರ ಮೇಲಿನ ಯುದ್ಧವನ್ನು

ವಿರೋಧಿಸಿ ಹೋರಾಡಬೇಕೆಂದು ಜನರು ಹಾಗೂ ಪ್ರಜಾತಂತ್ರವಾದಿಗಳಲ್ಲಿ ಪತ್ರಿಕಾಹೇಳಿಕೆಯ ಮುಖಾಂತರ ಕೇಳಿಕೊಂಡಿದೆ.

ಇಂದು  ಜಗತ್ತಿನ ವ್ಯವಸ್ಥೆ ತೀವ್ರವಾದ ಅಲ್ಲೋಲ ಕಲ್ಲೋಲಗಳಿಂದ ತುಂಬಿದೆ. ಇದು ಇದುವರೆಗೂ ಕಂಡರಿಯದ ರೀತಿಯಲ್ಲಿದೆ. ನಿರುದ್ಯೋಗಗಳೇ ಇಲ್ಲ ಎನ್ನುವಂತಿದ್ದ ಬಂಡವಾಳಶಾಹಿ ದೇಶಗಳಾದ ಅಮೇರಿಕ, ಜಪಾನು, ಬ್ರಿಟನ್, ಜಪಾನುಗಳಲ್ಲಿ ಇಂದು ನಿರುದ್ಯೋಗದ ಪ್ರಮಾಣ ಹಿಂದೆಂದೂ ಕಾಣದಷ್ಟು ಏರುತ್ತಿದೆ. ಅಮೇರಿಕದಲ್ಲಿ ಶೇ.೯ರ ಗಡಿಯನ್ನು ದಾಟಿದೆ. ಯೂರೋಪಿನಲ್ಲಿ ಅದು 2008ರ ನವಂಬರಿನಲ್ಲೇ ಶೇ.11ರ ಗಡಿಯನ್ನು ದಾಟಿತ್ತು. ಸೆಪ್ಟಂಬರ್ 2008ರಲ್ಲೇ ಅಮೇರಿಕದ ಸುಮಾರು 4000ದಷ್ಟು ಬ್ಯಾಂಕ್‌ಗಳು ದಿವಾಳಿಯಾಗಿದ್ದವು. ಅಮೇರಿಕದ ಸುಮಾರು 1.04 ದಶಲಕ್ಷದಷ್ಟು ಕೈಗಾರಿಕಾ ಹಾಗೂ ವ್ಯಾಪಾರಿ ಸಂಸ್ಥೆಗಳು ದಿವಾಳಿ ಘೋಷಣೆಗಾಗಿ ಫೆಡರಲ್ ನ್ಯಾಯಾಲಯದಲ್ಲಿ 2008ರ ಸೆಪ್ಟಂಬರಿನಲ್ಲೇ ಅರ್ಜಿ ಸಲ್ಲಿಸಿದ್ದವು. ಇದು ಶೇ.30ರಷ್ಟು ಹೆಚ್ಚಳವೆಂದು ಹೇಳಲಾಗಿತ್ತು. 2008ರ ಸೆಪ್ಟಂಬರ್ ವೇಳೆಗೇ ಪ್ರಪಂಚದ ಕಂಪನಿಗಳ ಶೇ. 38 ರಷ್ಟು ಸಂಪತ್ತು ಆರ್ಥಿಕ ಬಿಕ್ಕಟ್ಟಿನಿಂದಾಗಿ ಕೊಚ್ಚಿಕೊಂಡು ಹೋಗಿತ್ತು. ದೊಡ್ಡ ದೊಡ್ಡ ಕಂಪನಿಗಳನ್ನು ರಕ್ಷಿಸಲು ಜನತೆಯ ತೆರಿಗೆಯ ಹಣವನ್ನು ಸರ್ಕಾರಗಳು ಬಿಲಿಯಾಂತರ ಡಾಲರುಗಳ ಮಟ್ಟದಲ್ಲಿ ಬಳಸುತ್ತಿವೆ. ಅಮೇರಿಕ ಮತ್ತು ಯೂರೋಪಿನ ಸರ್ಕಾರಗಳು ಜನರ ಎರಡು ಟ್ರಿಲಿಯನ್ ಡಾಲರ್ ಹಣವನ್ನು 2008 ರ ಅಕ್ಟೋಬರ್ ವೇಳೆಗೆ ಮುಳುಗುತ್ತಿರುವ ಕಂಪನಿಗಳನ್ನು ರಕ್ಷಿಸಲು ಖರ್ಚು ಮಾಡಿದ್ದವು. ಇದು ಭಾರತದ 2007-08 ರ ಒಟ್ಟು ರಾಷ್ಟ್ರೀಯ ಉತ್ಪನ್ನದ ಎರಡು ಪಟ್ಟಿನಷ್ಟಾಗಿತ್ತು.! ಇದೇ ರೀತಿಯಲ್ಲಿ ಬ್ರಿಟನ್, ಜರ್ಮನಿ, ಜಪಾನ್, ಫ್ರಾನ್ಸ್‌ಗಳ ಸರ್ಕಾರಗಳು ಜನರ ತೆರಿಗೆಯ ಹಣವನ್ನು ದೊಡ್ಡ ಬಹುರಾಷ್ಟ್ರೀಯ ಬಂಡವಾಳಶಾಹಿ ಕಂಪನಿಗಳನ್ನು ರಕ್ಷಿಸಲು ಖರ್ಚು ಮಾಡುತ್ತಿವೆ.

ಇದೆಲ್ಲದರ ಪರಿಣಾಮವಾಗಿ ಭಾರತದಲ್ಲೂ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಸಿದ್ಧ ಉಡುಪು ಕ್ಷೇತ್ರ, ಇನ್ನಿತರ ರಂಗಗಳು ತೀವ್ರ ಹಾನಿಗೆ ಒಳಗಾಗಿವೆ. ಬಾರತ ಸರ್ಕಾರ ದಿನವೊಂದಕ್ಕೆ ತೆರಿಗೆದಾರರ 700 ಕೋಟಿಗಳಷ್ಟು ಹಣವನ್ನು ಕಾರ್ಪೋರೆಟ್ ಕಂಪನಿಗಳಿಗೆ ಕೇವಲ ಸಬ್ಸಿಡಿಗಾಗಿಯೇ ವ್ಯಯಿಸುತ್ತಿದೆ ಎಂದು  ಇದೇ ಆಗಸ್ಟ್ 15 ರ ದಿ ಹಿಂದು ಪತ್ರಿಕೆ ವರದಿ ಮಾಡಿದೆ. ಭಾರತದ ಬಹುಸಂಖ್ಯಾತ ಜನರ ದಿನವೊಂದರ ಕೊಳ್ಳುವ ಸಾಮರ್ಥ್ಯ ಕೇವಲ 20 ರೂಪಾಯಿಗಳು ಎಂದು ವರದಿಗಳಿವೆ. ಆರ್ಥಿಕ ಬೆಳವಣಿಗೆಯ ದರ 2010 ರ ವೇಳೆಗೆ ಶೇ.11ರಷ್ಟು ಸಾಧಿಸಲಾಗುತ್ತದೆ ಎಂದು ತಮ್ಮದೇ ಅಂಕಿಅಂಶಗಳಿಂದ ಬಿಂಬಿಸಿಕೊಂಡಿದ್ದರೂ ಅದು ಈಗ ಅವರದೇ ಅಂಕಿ ಅಂಶಗಳಲ್ಲಿ ಶೇ.6ಕ್ಕೆ ಕುಸಿದು ಮತ್ತೂ ಕುಸಿಯಲಾರಂಭಿಸಿದೆ. ಹಾಡಹಗಲೇ ಕೊಳ್ಳೆ ನಡೆಸಿದ ಸತ್ಯಂ ಕಂಪ್ಯೂಟರ್ ಕಂಪನಿಯನ್ನು ಉಳಿಸಲು ತೆರಿಗೆದಾರರ ಸಾವಿರಾರು ಕೋಟಿ ಹಣವನ್ನು ಸರ್ಕಾರಗಳು ಯಾವುದೇ ಎಗ್ಗಿಲ್ಲದೆ ಖರ್ಚು ಮಾಡಿದ್ದು ನಮ್ಮ ಕಣ್ಣಮುಂದಿವೆ. ಇದು ಕೆಲವು ಉದಾಹರಣೆಗಳಷ್ಟೇ.

ಟೆಕ್ಕಿಗಳು ಕಂಗಾಲಾಗಿದ್ದಾರೆ. ನವ ವಸಾಹತು ಲೂಟಿಯ ಜಾಗತೀಕರಣದಿಂದಾಗಿ ರೈತರ ಆತ್ಮಹತ್ಯೆಗಳು ಲಕ್ಷಗಟ್ಟಲೆ ಸಂಖ್ಯೆಗಳಲ್ಲಿ ಸಾಗಿವೆ. ಒಂದು ಅಂದಾಜಿನ ಪ್ರಕಾರ ಅದು ಎರಡು ಲಕ್ಷದ ಗಡಿದಾಟಿದೆ. ಲಕ್ಷಾಂತರ ಸಣ್ಣ, ಮಧ್ಯಮ ಕೈಗಾರಿಕೆಗಳು, ವ್ಯಾಪಾರಿ ಸಂಸ್ಥೆಗಳು ಈಗಾಗಲೇ ಮುಚ್ಚಿ  ಕೋಟ್ಯಾಂತರ ಕಾರ್ಮಿಕರು ಕೆಲಸ ಕಳೆದು ಕೊಂಡು ಬೀದಿಪಾಲಾಗಿದ್ದಾರೆ. ಬೆಲೆಯೇರಿಕೆ ಆಕಾಶದತ್ತ ಸಾಗಿದೆ. ಯಾವುದೇ ಕ್ಷೇತ್ರ ನೋಡಿದರೂ ಬಿಕ್ಕಟ್ಟು ನಿರ್ಮಾಣವಾಗಿದೆ. ರೂಪಾಯಿ ಮೌಲ್ಯ ಕುಸಿತ ಹಿಂದೆಂದೂ ಇಲ್ಲದಷ್ಟಾಗಿದೆ. ನಿರುದ್ಯೋಗದ ಸಮಸ್ಯೆ

ವಿಪರೀತವಾಗಿದೆ. ಸರ್ಕಾರಗಳು ಜನರ ಮೇಲೆ ನಡೆಸುವ ದಮನಕಾಂಡ, ಲೂಟಿಗಳು ದಿನೇ ದಿನೇ ಹೆಚ್ಚುತ್ತಲೇ ಇವೆ. ಜನರು ನಡೆಸುವ ಪ್ರತಿಭಟನೆಗಳನ್ನು ಸರ್ಕಾರಗಳು ಸಹಿಸುತ್ತಿಲ್ಲ. ಇತ್ತೀಚೆಗೆ ಅಸಂಘಟಿತ ಕಾರ್ಮಿಕರು ನಡೆಸಿದ ನ್ಯಾಯಯುತ ಪ್ರತಿಭಟನೆಯನ್ನು ಕರ್ನಾಟಕ ಸರ್ಕಾರ ಲಾಟಿಚಾರ್ಜು ಕೇಸುಗಳ ಮೂಲಕ ದಮನಿಸಿದ್ದನ್ನು ಗಮನಿಸಬಹುದು. ಅಲ್ಲದೆ ವಿಪರೀತದ ನಿಬಂಧನೆಗಳನ್ನು ಜನರ ಪ್ರತಿಭಟನೆಗಳ ಮೇಲೆ ಹೇರಲಾಗುತ್ತಿದೆ. ಜನರ ಧ್ವನಿಗಳನ್ನು ತೀವ್ರ ರೀತಿಯಲ್ಲಿ ಹತ್ತಿಕ್ಕಲಾಗುತ್ತಿದೆ. ನಂದಿಗ್ರಾಮ, ಸಿಂಗೂರು, ಲಾಲ್‌ಗಢದ ಹೋರಾಟದ ಮೇಲೆ ಭಾರತ ಹಾಗು ಪಶ್ಚಿಮ ಬಂಗಾಳ ಸರ್ಕಾರಗಳು ಎರಗಿರುವ ರೀತಿ ನೋಡಿದಲ್ಲಿ ಇದು ಅರ್ಥವಾಗುತ್ತದೆ.

ನಂದಿಗ್ರಾಮ ಸಿಂಗೂರಿನ ಜನರು ನಡೆಸಿದ ಹೋರಾಟಗಳ ಮುಂದುವರಿಕೆಯೇ ಲಾಲ್‌ಗಢದ ಜನರ ಹೋರಾಟವಾಗಿದೆ. ಇದು ದೇಶಾದ್ಯಂತ ಪ್ರಭಾವಿಸುತ್ತಿದೆ. ಇಂದು ಮಧ್ಯಭಾರತದ ಹಲವು ರಾಜ್ಯಗಳನ್ನೊಳಗೊಂಡ ಒಂದು ಗಣನೀಯ ಪ್ರದೇಶದಲ್ಲಿ ಸರ್ಕಾರದ ಹಿಡಿತ ಪೂರ್ತಿಯಾಗಿ ತಪ್ಪುತ್ತಿದೆ. ಈ ಪ್ರದೇಶ ವಿಪುಲವಾದ ನಿಸರ್ಗ ಸಂಪತ್ತುಗಳನ್ನು ಹೊಂದಿದೆ. ಪ್ರಧಾನ ರೇಲ್ವೆ ಮಾರ್ಗಗಳು ಈ ಪ್ರದೇಶದಿಂದಲೇ ಸಾಗುತ್ತವೆ. ಮಾವೋವಾದಿಗಳು ಇಲ್ಲಿ ಜನತೆಯ ಪರ್ಯಾಯ ಸರ್ಕಾರವನ್ನು ಪರಿಚಯಿಸಿ ಜನತೆಯ ಪ್ರಜಾಪ್ರಭುತ್ವವನ್ನು ಜಾರಿಗೊಳಿಸುತ್ತಿದ್ದಾರೆ. ಇದನ್ನು 'ಜನತಾನ ಸರ್ಕಾರ್' ಎಂದು ಕರೆಯಲಾಗುತ್ತಿದೆ. ಇದೇ ಪ್ರಯೋಗವೇ ಲಾಲ್‌ಗಢದಲ್ಲೂ ಸಾಗಿದೆ. ಲಾಲ್‌ಗಢದ ಸುತ್ತಮುತ್ತಲಿನ ಸಾವಿರಾರು ಹಳ್ಳಿಗಳಲ್ಲಿ ಈ ರೀತಿಯ ಜನರ ಸರ್ಕಾರ ರಚಿಸಲಾಗಿದೆ ಎಂದು ಹೇಳಲಾಗುತ್ತಿದೆ. ಈಗ ಸರ್ಕಾರದ ಪಡೆಗಳು ಲಾಲ್‌ಗಢವನ್ನು ಪ್ರವೇಶಿಸಿದ್ದರೂ ಜನತೆಯ ಸರ್ಕಾರವೇ ಅಲ್ಲಿನ ಆಡಳಿತ ನಡೆಸುತ್ತಿದೆ ಎಂಬ ವರದಿಗಳು ಬರುತ್ತಿವೆ. ಸರ್ಕಾರಿ ಪಡೆಗಳು ಲಾಲ್‌ಗಢದಂತಹ ಕೆಲವು ಪೋಲೀಸ್ ಠಾಣೆಗಳಿಗೆ ಮಾತ್ರ ಸೀಮಿತವಾಗಿವೆ ಎಂದು 'ಹಿಂದೂಸ್ತಾನ್ ಟೈಮ್ಸ್' ನಂತಹ ಪತ್ರಿಕಾ ವರದಿಗಳು ಹೇಳುತ್ತಿವೆ.

ಭಾರತದ ಈಗಿನ ಗೃಹ ಮಂತ್ರಿ ಪಿ. ಚಿದಂಬರಂ ಕೂಡ ವೇದಾಂತ ಎಂಬ ಗಣಿ ಕಂಪನಿಯ ಒಬ್ಬ ಮುಖ್ಯ ಪಾಲುದಾರ. ಮಂತ್ರಿಯಾಗುವುದಕ್ಕೂ ಮೊದಲು ಅದರ ನಿರ್ದೇಶಕರಾಗಿದ್ದವರು. ಈ ವೇದಾಂತ ಕಂಪನಿಯೂ ಗಣಿಗಾರಿಕಾ ಒಪ್ಪಂದವನ್ನು ಸರ್ಕಾರಗಳ ಜೊತೆ ಮಾಡಿಕೊಂಡಿದೆ ಎಂಬುದೂ ಕೂಡ ಗಮನಾರ್ಹ. ಹಾಗಾಗಿ ಅವರ ನೇರ ಹಿತಾಸಕ್ತಿ ಈ ಯುದ್ದದೊಂದಿಗೆ ತಳುಕು ಹಾಕಿಕೊಂಡಿದೆ. ಇದೇ ರೀತಿಯ ಹಿತಾಸಕ್ತಿಗಳೇ ಇರಾಕ್, ಅಫ್ಘಾನಿಸ್ತಾನ್ ಯುದ್ಧಗಳಿಗೆ ಮುಖ್ಯ ಕಾರಣಗಳಾಗಿರುವುದು. ಹಿಂದೆ ನಡೆದ ಗೋಧ್ರಾ ನರಮೇಧಗಳಿಗೂ ಕೂಡ ಅಂಬಾನಿಯಂತಹವರ ಇಂತಹುದೇ ಬಂಡವಾಳಶಾಹಿ ಕಾರಣಗಳೇ ಇವೆ. ಈ ರೀತಿಯ ಹಲವು ತೀವ್ರ ಬಿಕ್ಕಟ್ಟುಗಳನ್ನು ಎದುರಿಸುತ್ತಿರುವ ಆಳುವ ಜನಗಳು ಅದರಿಂದ ಹೊರಬರಲು ಮತ್ತೂ ಮತ್ತೂ ಲೂಟಿ, ಹಗಲು ದರೋಡೆಗಳನ್ನು ಹೆಚ್ಚು ಮಾಡುವುದಕ್ಕಾಗಿಯೇ ಮಾವೋವಾದಿ ಕ್ರಾಂತಿಕಾರಿಗಳ ಮೇಲೆ ಹಿಂದೆಂದೂ ಇಲ್ಲದ ಮಟ್ಟದಲ್ಲಿ ಎರಗುತ್ತಿದ್ದಾರೆ. ಆದರೆ ಇದು ಕೇವಲ ಮಾವೋವಾದಿಗಳ ಮೇಲಿನ ಯುದ್ಧ ಮಾತ್ರ ಆಗುವುದಿಲ್ಲ ಅದು ಭಾರತದ ಜನಸಾಮಾನ್ಯರ ಮೇಲಿನ ಹಾಗು ಪ್ರಜಾಪ್ರಭುತ್ವವಾದಿಗಳ ಮೇಲಿನ ಯುದ್ಧವಾಗಿರುತ್ತದೆ ಎಂಬುದು ಸರ್ಕಾರಗಳ ಈಗಿನ ನಡೆಗಳಿಂದ ತಿಳಿದು ಬರುತ್ತಿರುವ ವಿಚಾರವಾಗಿದೆ.

ಈಗ ಹೇಳಿ, ಇವರುಗಳ ಜನರ ಮೇಲಿನ ಈ ಅಕ್ರಮ ಯುದ್ಧವನ್ನು ವಿರೋಧಿಸಿ ಹೋರಾಡಬೇಕಾದುದು ನಮ್ಮೆಲ್ಲರ ಪ್ರಜಾಪ್ರಭುತ್ವವಾದಿ ಕರ್ತವ್ಯವಲ್ಲವೆ.?

09-10-2009 ----**ರಂಗರಾಜ್ ಮತ್ತಿಕಟ್ಟಿ**